ಹೇಳಿದರು. ಅದಕ್ಕಾಗಿ ಸಮ್ಮತಿ ಮತ್ತು ಸಹಕಾರ ಸಿಕ್ಕಿತು. ಆದಷ್ಟು ಬೇಗನೆ ಈ ಪ್ರಕರಣವನ್ನು ಭೇದಿಸುವುದಾಗಿ ಹೇಳಿದರು. ಕಾಲೇಜಿಗೆ ಅಥವಾ ವಿದ್ಯಾರ್ಥಿಗಳಿಗೆ ತೊಂದರೆಯಾಗದಂತೆ, ಕ್ಯಾಂಪಸ್‌ನಲ್ಲಿ ಗೊಂದಲ, ಗಲಾಟೆಗಳಾಗದಂತೆ ಶೋಧಕಾರ್ಯ ನಡೆಸಬೇಕೆಂದು ಪ್ರಿನ್ಸಿಪಾಲರು ಕೋರಿದ್ದರು. ಅದರಂತೆಯೇ ಕುಲಕರ್ಣಿ ತಮ್ಮ ಕೆಲಸವನ್ನು ಆರಂಭಿಸಿದ್ದರು.

ಎಲ್ಲವನ್ನೂ ನೋಡುತ್ತಾ, ಕೇಳಿಸಿಕೊಳ್ಳುತ್ತಾ ಮೂಕ ಸಾಕ್ಷಿಗಳಾಗಿದ್ದರು ಮೀರಾ ಮತ್ತು ಮಾನಸಿ. ಎಲ್ಲೂ ಏನನ್ನೂ ಹೇಳುವ ಕೇಳುವ ಧೈರ್ಯವಾಗಲೀ, ಪ್ರಶ್ನೆಗಳಾಗಲೀ ಇರಲಿಲ್ಲ.

ಇನ್‌ಸ್ಪೆಕ್ಟರ್ ಕುಲಕರ್ಣಿ ಪೆಥಾಲಜಿ ವಿಭಾಗದ ಲೈಬ್ರರಿ, ಲ್ಯಾಬೋರೇಟರಿ, ಶಿಕ್ಷಕರು, ಸಾಕ್ಷಿಯ ಸಹಪಾಠಿಗಳ ಪರೀಕ್ಷೆ, ವಿಚಾರಣೆ ನಡೆಸಿದಾಗ ಯಾವ ರೀತಿಯ ಪ್ರಯೋಜನವೂ ಆಗಲಿಲ್ಲ. 'ಸಾಕ್ಷಿ ಒಳ್ಳೆಯವಳು, ಒಳ್ಳೆಯ ವಿದ್ಯಾರ್ಥಿನಿ' ಎಂಬುದನ್ನು ಬಿಟ್ಟರೆ ಬೇರೆ ವಿವರಗಳು ಅವರ ಶೋಧಕಾರ್ಯಕ್ಕೆ ಸಹಾಯಕವಾಗಿರಲಿಲ್ಲ. ಇನ್ನು ಉಳಿದದ್ದು ಅನಾಟಮಿ ವಿಭಾಗ. ಅಲ್ಲಿಯೂ ಇದಕ್ಕಿಂತ ಭಿನ್ನವಾಗಿರುವುದೇನೂ ಸಿಗಲಾರದು. ಸ್ನಾತಕೋತ್ತರ ಪೆಥಾಲಜಿ ವಿಭಾಗದಲ್ಲಿರುವ ವಿದ್ಯಾರ್ಥಿಗಳಿಗೆ ಅಲ್ಲೇನು ಕೆಲಸವಿರಲಾರದು. ಒಂದು ಅನುಮಾನವೆಂದರೆ, ನಾಪತ್ತೆಯಾಗುವ ಮೊದಲು ಸಾಕ್ಷಿ ಅನಾಟಮಿ ಬ್ಲಾಕ್‌ಗೆ ಹೋಗಿದ್ದನ್ನು ಅವಳ ಸ್ನೇಹಿತೆ ಡಾಕ್ಟರ್ ಪೂರ್ಣಿಮಾ ನೋಡಿದ್ದು, ಅದಕ್ಕೆ ಪೂರಕವಾದ ಹೇಳಿಕೆಯನ್ನು ಡಾಕ್ಟರ್ ಶಿವಾನಂದ ಕೊಟ್ಟಿದ್ದರು. ಆದರೆ ಸಾಕ್ಷಿಯು ಅಲ್ಲಿಂದ ಹೊರಗೆ ಬಂದದ್ದನ್ನು ಯಾರೂ ನೋಡಿರಲಿಲ್ಲ!

ಕುತೂಹಲ ತಡೆಯಲಾರದೆ, ಮಾನಸಿ ಕುಲಕರ್ಣಿಯವರನ್ನು ವಿಚಾರಿಸಿದಳು.

'ಅದೇ ಡಾಕ್ಟರ್, ಸಾಕ್ಷಿಯವರು ಅಲ್ಲಿಂದ ಹೊರಗೆ ಬಂದಿದ್ದನ್ನು ನೋಡಿದವರು ಯಾರೂ ಇಲ್ಲ. ಸಾಕ್ಷಿಯವರು ಅನಾಟಮಿ ಹಾಲ್‌ನೊಳಗೆ ಹೋಗಿ ಡಾಕ್ಟರ್ ಶಿವಾನಂದರ ರೂಮಿನಲ್ಲಿ ಕುಳಿತಿದ್ದರು ಎಂಬುದಕ್ಕೆ ಸಾಕ್ಷಿ ಸಿಕ್ಕಿಲ್ಲ. ಪೆಥಾಲಜಿ ವಿಭಾಗದ ಸ್ನಾತಕೋತ್ತರ ಪದವಿಯ ವಿದ್ಯಾರ್ಥಿಗಳು ಒಮ್ಮೊಮ್ಮೆ ಅನಾಟಮಿ ವಿಭಾಗದ ಮ್ಯೂಸಿಯಂಗೆ ಹೋಗುತ್ತಿದ್ದರು. ಆದರೆ ರೆಗ್ಯುಲರ್ ಆಗಿ ಹೋಗುವುದಿಲ್ಲ ಎಂದು ತಿಳಿಯಿತು. ಹೌದಾ?' ಕುಲಕರ್ಣಿ ಕೇಳಿದರು.

'ಹೌದು ಸರ್. ಆಗಾಗ್ಗೆ, ಬೇಕಾದರೆ ಸ್ಪೆಸಿಮನ್ಸ್ ನೋಡಲು ಹೋಗ್ತಾರೆ' ಎಂದಳು ಮಾನಸಿ.

'ನಮ್ಮಿಂದ ಏನಾದರೂ ಸಹಾಯ ಬೇಕಾದರೆ ಕೇಳಿ. ನಿಮ್ಮ ಯಾವುದೇ ಪ್ರಶ್ನೆಗಳಿಗೆ ನಮ್ಮಿಂದ ಬೇಕಾದ ಉತ್ತರ ಸಿಗಬಹುದು' ಎಂದ ಮಾನಸಿ, ತಟ್ಟನೆ ಯೋಚನೆಯೊಂದು ಹೊಳೆದಂತಾಗಿ, 'ಸರ್, ಅನಾಟಮಿ ವಿಭಾಗದ ಹಾಲ್ ಬಳಿ ಸದಾ ಕಾವಲಿರುವ ವಾಚ್‌ಮನ್ ಇಲ್ಲವೇ ಜವಾನರ ಬಳಿ ನಿಮಗೆ ಬೇಕಾದ ಉತ್ತರಗಳು ಸಿಗಬಹುದೇನೋ?' ಎಂದಳು. ಅವಳ ಮಾತು ಕೇಳಿ ಕುಲಕರ್ಣಿಯವರ ತಲೆಯಲ್ಲೂ ಮಿಂಚು ಹೊಡೆದಂತಾಯಿತು.

'ಒಳ್ಳೆಯ ಸುಳಿವು ಕೊಟ್ಟಿರಿ...' ಎಂದರು ನಗುತ್ತಾ.

'ನಾನು ಫಾರೆನ್ಸಿಕ್ ಮೆಡಿಸಿನ್ ಸ್ಟೂಡೆಂಟ್ ಸರ್' ಎಂದಳು ಮೃದುವಾಗಿ.

'ಥ್ಯಾಂಕ್ಸ್' ಎಂದ ಕುಲಕರ್ಣಿ ಅಲ್ಲಿಂದ ಹೊರಟರು.

ರೂಮಿಗೆ ಬಂದ ಮಾನಸಿ, ಮೀರಾಳಿಗೆ ಎಲ್ಲಾ ವಿಷಯ ತಿಳಿಸಿದಳು. ಅವಳ ಉತ್ಸಾಹ ಕಂಡ ಮೀರಾ, 'ನೀನು ಫಾರೆನ್ಸಿಕ್ ಮೆಡಿಸಿನ್ಸ್ ವಿಷಯ ತಗೊಂಡಿದ್ದು ಸಾರ್ಥಕವಾಯಿತು' ಎಂದಳು.

'ಆದರೆ ನಮ್ಮ ಸಾಕ್ಷಿ ಇನ್ನೂ ಪತ್ತೆಯಾಗಲಿಲ್ಲ ಮೀರಾ...' ಎಂದಳು ನಿರಾಶೆಯಿಂದ. ಅವ್ಯಕ್ತ ನೋವು ಸ್ವರದಲ್ಲಿತ್ತು.

'ಪೊಲೀಸ್ ಡಿಪಾರ್ಟ್‌ಮೆಂಟಿಗೆ ಏನು ಸಾಕ್ಷಿಗಳು ಬೇಕಂತೆ?'

'ಸಾಕ್ಷಿ ಅಲ್ಲಿಗೆ ಹೋಗಿದ್ದಕ್ಕೆ, ಅಲ್ಲಿಂದ ಹೊರಗೆ ಬಂದಿದ್ದಕ್ಕೆ ಸರಿಯಾದ ಸಾಕ್ಷಿಗಳು ಬೇಕಂತೆ...'